# ಸಂಪಾದಕೀಯ

ಉದಯವಾಣಿ
ಮಂಗಳವಾರ | ಮಾರ್ಚ್ | 22 | 2016

**ಶುಭನುಡಿ**

ಶ್ರೇಷ್ಠವಾದ ಚಿಂತನೆಗಳು ಸಾಮಾನ್ಯ ವ್ಯಕ್ತಿಯನ್ನೂ ಯೋಗ್ಯ ವ್ಯಕ್ತಿಯನ್ನಾಗಿ ರೂಪಿಸಬಲ್ಲವು.

### ಯೋಜನೆ ಜಾರಿಗೆ ತಂದರೆ ಸಾಲದು, ಜಾಗೃತಿ ಮೂಡಿಸಿ

## ಅಪಘಾತ ಸಾಂತ್ವನದ ಅಣಕ

ಅಪಘಾತದಲ್ಲಿ ಗಾಯಗೊಂಡವರಿಗೆ ಉಚಿತವಾಗಿ ತುರ್ತು ಚಿಕಿತ್ಸೆ ನೀಡುವ ವಿಶಿಷ್ಟ ಯೋಜನೆಯನ್ನು ಜಾರಿಗೆ ತಂದು ಇಡೀ ದೇಶಕ್ಕೆ ಮಾದರಿಯಾಗಿದ್ದೇವೆ ಎಂದು ಕರ್ನಾಟಕ ಸರಕಾರ ಬೀಗಿ ವಾರವಷ್ಟೇ ಕಳೆದಿದೆ. ಆದರೆ, ಅದರ ಬಗ್ಗೆ ಆಸ್ಪತ್ರೆಗಳಿಗೇ ಸೂಕ್ತ ಸಂದೇಶ ರವಾನೆಯಾಗಿಲ್ಲ ಎಂಬುದಕ್ಕೆ ನಿದರ್ಶನವಾಗುವ ಘಟನೆಯೊಂದು ಬೆಂಗಳೂರಿನಲ್ಲಿ ನಡೆದಿರುವುದು ವಿಪರ್ಯಾಸ.

2 ದಿನದ ಹಿಂದೆ ಮಧ್ಯರಾತ್ರಿಯ ವೇಳೆ ಬೆಂಗಳೂರಿನ ರಸ್ತೆಯಲ್ಲಿ ಬೈಕ್ ಸವಾರನೊಬ್ಬ ಅಪಘಾತಕ್ಕೀಡಾಗಿದ್ದ. ಅವನನ್ನು ಪೊಲೀಸರು ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಿಸಿ ಮನೆಗೆ ತೆರಳಿದ್ದರು. ಬೆಳಗ್ಗೆ ಅವನನ್ನು ನೋಡಲೆಂದು ಪೊಲೀಸರು ಹೋದರೆ ಆತ ನೋವಿನಲ್ಲಿ ನರಳುತ್ತಾ ಹಾಗೇ ಬಿದ್ದಿದ್ದ. ಆತನ ಹೆಸರು, ವಿಳಾಸ ಗೊತ್ತಿಲ್ಲವೆಂದು ಆಸ್ಪತ್ರೆಯ ಸಿಬಂದಿ ಪ್ರಾಥಮಿಕ ಚಿಕಿತ್ಸೆಯನ್ನೂ ನೀಡಿರಲಿಲ್ಲ. ಅನಂತರ ಪೊಲೀಸರು ಅವನನ್ನು ಸರಕಾರಿ ಆಸ್ಪತ್ರೆಗೆ ಕೊಂಡೊಯ್ದರು. ಅಲ್ಲೂ ಕೆಲ ನೆಪ ಹೇಳಿ ಚಿಕಿತ್ಸೆ ನಿರಾಕರಿಸಿದರು. ಅನಂತರ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲೀಗ ಆತ ಜೀವನ್ಮರಣ ಹೋರಾಟ ನಡೆಸುತ್ತಿದ್ದಾನೆ. ಅಚ್ಚರಿಯ ಸಂಗತಿ ಏನೆಂದರೆ, ಅಪಘಾತಕ್ಕೀಡಾದ ತತ್‌ಕ್ಷಣ ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದರೂ ಅವನಿಗೆ ಪ್ರಥಮ ಚಿಕಿತ್ಸೆ ಸಿಗುವ ಹೊತ್ತಿಗೆ ಅನಾಮತ್ತು 15 ತಾಸು ಕಳೆದಿತ್ತು!



**ಈ ಘಟನೆಯಲ್ಲಿ ಸ್ವತಃ ಪೊಲೀಸರೇ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ನೀಡದ ವೈದ್ಯರು, ಇನ್ನು ಜನಸಾಮಾನ್ಯರು ಅಪಘಾತದ ಗಾಯಾಳುಗಳನ್ನು ಆಸ್ಪತ್ರೆಗೆ ತಂದರೆ ಚಿಕಿತ್ಸೆ ನೀಡುತ್ತಾರೆಯೇ?**

ಇದು 'ಮುಖ್ಯಮಂತ್ರಿ ಸಾಂತ್ವನ ಹರೀಶ್ ಯೋಜನೆ' ಎಂಬ ರಾಜ್ಯ ಸರಕಾರದ ಉತ್ತಮ ಯೋಜನೆಯೊಂದರ ಅಣಕವಲ್ಲದೆ ಬೇರೇನೂ ಅಲ್ಲ. ರಸ್ತೆ ಅಪಘಾತದಲ್ಲಿ ದೇಹ ಎರಡು ತುಂಡಾಗಿ ಬಿದ್ದಿದ್ದರೂ ನನ್ನ ಕಣ್ಣು ದಾನ ಮಾಡಿ ಎಂದು ಕೇಳಿಕೊಂಡ ಹರೀಶ್ ಎಂಬ ಯುವಕನ ಹೆಸರಿಟ್ಟು ಕಳೆದ ವಾರವಷ್ಟೇ ಸರಕಾರ ಈ ಯೋಜನೆ ಜಾರಿಗೆ ತಂದಿದೆ. ಯೋಜನೆಯನ್ವಯ ರಾಜ್ಯದಲ್ಲಿ ಯಾವುದೇ ವ್ಯಕ್ತಿ ಅಪಘಾತಕ್ಕೀಡಾದರೂ ಆತನ ಕುಲ–ಗೋತ್ರ ಕೇಳದೆ ಆರಂಭಿಕ 48 ಗಂಟೆಗಳ ಕಾಲ ಎಲ್ಲ ಆಸ್ಪತ್ರೆಗಳಲ್ಲೂ 25 ಸಾವಿರ ರೂ. ವರೆಗಿನ ಚಿಕಿತ್ಸೆಯನ್ನು ಉಚಿತವಾಗಿ ನೀಡಬೇಕು. ಈ ವೆಚ್ಚವನ್ನು ಸರಕಾರ ಭರಿಸುತ್ತದೆ. ಈ ಯೋಜನೆ ರಾಜ್ಯದ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ, ಆಸ್ಪತ್ರೆಗಳಲ್ಲಿ ಮಾತ್ರ ಇದಕ್ಕೆ ಕನಿಷ್ಠ ಸ್ಪಂದನೆಯೂ ಸಿಕ್ಕಿಲ್ಲ ಎಂಬುದು ದುರದೃಷ್ಟಕರ ಸಂಗತಿ.

ಈ ಘಟನೆಯಲ್ಲಿ ಸ್ವತಃ ಪೊಲೀಸರೇ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ನೀಡದ ವೈದ್ಯರು, ಇನ್ನು ಜನಸಾಮಾನ್ಯರು ಅಪಘಾತದ ಗಾಯಾಳುಗಳನ್ನು ಆಸ್ಪತ್ರೆಗೆ ತಂದರೆ ಚಿಕಿತ್ಸೆ ನೀಡುತ್ತಾರೆಯೇ? ಸರಕಾರ ಇಂತಹದ್ದೊಂದು ಯೋಜನೆ ಜಾರಿಗೆ ತಂದು, ಇದರ ಬಗ್ಗೆ ಆಸ್ಪತ್ರೆಗಳಿಗೆ ಸುತ್ತೋಲೆ ಕಳಿಸುವುದನ್ನು ಮರೆಯಿತೇ? ಒಂದು ಪಕ್ಷ ಸುತ್ತೋಲೆ ಕಳಿಸಿರದೆ ಇದ್ದರೂ ಗಾಯಗೊಂಡು ಆಸ್ಪತ್ರೆಗೆ ಬಂದವರಿಗೆ ಚಿಕಿತ್ಸೆ ನೀಡುವುದು ಎಲ್ಲ ಆಸ್ಪತ್ರೆಗಳ ಕರ್ತವ್ಯ. ಆದರೆ, ಬೆಂಗಳೂರಿನ ಒಂದು ಖಾಸಗಿ ಆಸ್ಪತ್ರೆ ಹಾಗೂ ಸರಕಾರಿ ಆಸ್ಪತ್ರೆ ಈ ಘಟನೆಯಲ್ಲಿ ಅಮಾನವೀಯವಾಗಿ ನಡೆದುಕೊಂಡಿದ್ದೇಕೆ? ಅವುಗಳ ವಿರುದ್ಧ ಸರಕಾರ ಕ್ರಮ ಕೈಗೊಳ್ಳಬೇಕು.

ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ದೊರೆಯುವುದು ತಡವಾಗುವ ಕಾರಣದಿಂದಲೇ ಗಾಯಗೊಂಡವರ ಮರಣ ಪ್ರಮಾಣ ಹೆಚ್ಚಿದೆ ಎಂದು ದೇಶಾದ್ಯಂತ ವ್ಯಾಪಕ ಚರ್ಚೆ ನಡೆಯುತ್ತಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ದರೆ ಮುಂದೆ ಕೋರ್ಟು, ಪೊಲೀಸ್ ಠಾಣೆಗೆ ಅಲೆಯಬೇಕಾಗುತ್ತದೆಯೆಂದು ಜನರು ಹಿಂದೇಟು ಹಾಕುವುದನ್ನು ತಪ್ಪಿಸಲು ಇತ್ತೀಚೆಗೆ ಸುಪ್ರೀಂಕೋರ್ಟ್ ಕೂಡ ಅಪಘಾತದಲ್ಲಿ ಗಾಯಗೊಂಡವರನ್ನು ಯಾರು ಆಸ್ಪತ್ರೆಗೆ ಸೇರಿಸುತ್ತಾರೋ ಅವರಿಂದ ಬಲವಂತವಾಗಿ ಸಾಕ್ಷ್ಯ ಕೇಳುವಂತಿಲ್ಲ ಎಂದು ಆದೇಶ ಹೊರಡಿಸಿದೆ. ಕರ್ನಾಟಕ ಸರಕಾರ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಗಾಯಾಳುಗಳಿಗೆ ಉಚಿತ ಚಿಕಿತ್ಸೆ ನೀಡಲು ಯೋಜನೆ ಆರಂಭಿಸಿದೆ. ಇಷ್ಟಾಗಿಯೂ ಇಂತಹದ್ದೊಂದು ಘಟನೆ ನಡೆಯುತ್ತದೆ ಅಂದರೆ ಈ ಬಗ್ಗೆ ಸರಕಾರ ದೊಡ್ಡ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮ ಹಮ್ಮಿಕೊಳ್ಳುವ ಅಗತ್ಯವಿದೆ.

### ಕೆರೆ ತುಂಬಿದರೆ, ಅಂತರ್ಜಲ ಮರುಪೂರಣ ಮಾಡಿದರೆ ಸಮಸ್ಯೆ ಬಗೆಹರಿಯದು!

# ನೀರಿಗೂ ಒಂದು ಬಜೆಟ್ ಬೇಕು

ನೀರಿಗಾಗಿ ಯುದ್ಧಗಳಾಗುತ್ತವೆ ಎಂಬ ಭವಿಷ್ಯವಾಣಿ ವಾಸ್ತವವಾಗುವುದನ್ನು ಕಣ್ಣ ಮುಂದೆ ನೋಡುತ್ತಿದ್ದೇವೆ. ನೀರಿಗಾಗಿ ರಾಜ್ಯ ರಾಜ್ಯಗಳ ನಡುವೆ ಮನವಿಗಳು, ಜಿಲ್ಲೆ ಜಿಲ್ಲೆಗಳ ನಡುವೆ ವಿರೋಧಗಳು, ನೀರಲ್ಲಿ ಹೋಳಿ ಆಡುವವರಿಗೆ ಹೊಡೆಯಲು ಕರೆ, ನೀರಿನ ಟ್ಯಾಂಕರ್ ಸುತ್ತ ಗಲಾಟೆಯಾಗದಂತೆ ನಿಷೇಧಾಜ್ಞೆ ಜಾರಿ, ನೀರಿನ ಸಮಸ್ಯೆ ಪರಿಹಾರಕ್ಕೆ ಅನೇಕ ಯೋಜನೆಗಳು... ಹೀಗೆ ನೀರಿನ ಬಗ್ಗೆ ಬರವಿಲ್ಲದಷ್ಟು ನಿತ್ಯ ಸುದ್ದಿಗಳಿವೆ.

ಕರ್ನಾಟಕದ ರಾಜ್ಯ ಬಜೆಟ್ ಮಂಡನೆಯಾಗಿದೆ. ಕೃಷಿ ಮತ್ತು ನೀರಾವರಿಗೂ ಕೆಲವು ಯೋಜನೆಗಳು ಘೋಷಣೆಯಾಗಿವೆ. ನೀರು ಎತ್ತುವ, ಹರಿಸುವ ಯೋಜನೆಗಳ ಪ್ರಸ್ತಾವನೆಯಾಗಿದೆ. ಕೆಲವು ನಗರಗಳಲ್ಲಿ ಕೊಳಚೆ ನೀರಿನ ಸಂಸ್ಕರಣ ಘಟಕಗಳ ಸ್ಥಾಪನೆ ಮತ್ತು ಹನಿ ನೀರಾವರಿಗೆ ಸಬ್ಸಿಡಿಯೂ ಘೋಷಣೆಯಾಗಿದೆ. ಇದಕ್ಕಾಗಿ ಸರಕಾರವನ್ನು ಶ್ಲಾಘಿಸಬೇಕು. ನೀರಿನ ಮರು ಬಳಕೆ ಮತ್ತು ಮಿತಬಳಕೆಯ ನಿಟ್ಟಿನಲ್ಲಿ ಸರಕಾರ ಯೋಚಿಸಿರುವುದು ಸಕಾಲಿಕ. ಆದರೂ ನಮ್ಮ ಮುಖ್ಯ ಸಮಸ್ಯೆ ಏನೆಂದರೆ ಹಣಕಾಸಿನ ವಿಚಾರಕ್ಕೆ ಬಂದಾಗ ಲೆಕ್ಕಾಚಾರ ಹಾಕಿದಷ್ಟು ನೀರಿನ ಲಭ್ಯತೆ ಮತ್ತು ಬಳಕೆಯ ಬಗ್ಗೆ ಲೆಕ್ಕಾಚಾರ ಹಾಕುವುದಿಲ್ಲ, ಯಾಕೆಂದರೆ ಅದು ಹಣವಲ್ಲ ನೀರು ತಾನೆ! ಕೊಳವೆ ಬಾವಿ ಕೊರೆದು ಸುಸ್ತಾಗಿರುವ, ಸುಸ್ತಿದಾರರಾಗಿರುವ ರೈತರು ಮತ್ತಷ್ಟು ಸಾಲ ಮಾಡಿ ಹೊಸ ಕೊಳವೆ ಬಾವಿಗಳನ್ನು ಕೊರೆಸಲು ಮುಂದಾಗುವ ಹಾಗೆ ನೀರಿಗಾಗಿ ಸಾಧ್ಯವಾದಷ್ಟೂ ಖರ್ಚು ಮಾಡಲು ಸರಕಾರಗಳು (ಜನರ ಒತ್ತಾಯವೂ ಇರುವುದರಿಂದ) ಮುಂದಾಗುತ್ತವೆ. ಅದೂ ನೀರಿನ ಬೇಡಿಕೆ, ಲಭ್ಯತೆಯ ಪೂರ್ಣ ತಿಳಿವಿಲ್ಲದೆ ಮತ್ತು ನೀರಿನ ಕೊರತೆಗೆ ಕಾರಣ ಮತ್ತು ಪರಿಹಾರಗಳ ಸ್ಪಷ್ಟ ಪರಿಕಲ್ಪನೆ ಇಲ್ಲದೆ!

### ಜಲಕ್ಷಾಮಕ್ಕೆ ಕಾರಣವೇನು?

ಜಗತ್ತಿನ ಇತರೆಡೆಗಳಂತೆ ನಮ್ಮಲ್ಲೂ ದಿನದಿಂದ ದಿನಕ್ಕೆ ನೀರಿನ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ನೀರು ಇಲ್ಲವೆಂದಾದರೆ ಸಾಲ ತಂದಾದರೂ ಬಂಡವಾಳ ಹೂಡಿ ದೊಡ್ಡ ಯೋಜನೆಗಳನ್ನು ಮಾಡಿ ನೀರು ಕೊಡುವ ಪ್ರಯತ್ನಗಳಾಗುತ್ತಿವೆ. ನೀರನ್ನು ಸೃಷ್ಟಿಸಲು ಆಗುವುದೇ? ಇರುವಲ್ಲಿಂದ ಇಲ್ಲದಿರುವ ಕಡೆಗೆ ತಿರುಗಿಸುವ ದೊಡ್ಡ ಯೋಜನೆಗಳನ್ನು ಮಾಡಿದರೂ ಅದು ಎಲ್ಲಿ ಇತ್ತೋ ಅಲ್ಲಿ ಕಡಿಮೆ ಆಗುತ್ತದೆಯಲ್ಲವೇ? ಇತ್ತೀಚೆಗೆ ಭೀಮಾ ನದಿಯಲ್ಲಿ ನೀರಿಲ್ಲದೆ ಮೀನುಗಳು ಸಾಯುತ್ತಿರುವ, ಮೊಸಳೆಗಳು ಹೊಲಗಳಿಗೆ ನುಗ್ಗುತ್ತಿರುವ ವರದಿಗಳಾಗಿವೆ. ಆ ನದಿಯಲ್ಲಿ ಯಾಕೆ ನೀರಿಲ್ಲ? ಭೀಮಾ ನದಿಗೆ ಅಡ್ಡಲಾಗಿ 21 ಅಣೆಕಟ್ಟೆಗಳನ್ನು ಮತ್ತು ಅದಕ್ಕಿಂತ ಹೆಚ್ಚು ಸಂಖ್ಯೆಯ ಬ್ಯಾರೇಜುಗಳನ್ನು ನಿರ್ಮಿಸಲಾಗಿದೆ. ಅಷ್ಟಾದ ಮೇಲೂ ನದಿಯಲ್ಲಿ ನೀರಿರಲು ಸಾಧ್ಯವೇ? ಮಾನವನ ಹಸ್ತಕ್ಷೇಪದಿಂದ ನದಿಗಳು ಸಾಯುತ್ತಿರುವ ಬಗ್ಗೆ ಜಗತ್ತಿನಾದ್ಯಂತ ಚರ್ಚೆಯಾಗುತ್ತಿದೆ.

ನದಿಗಳಲ್ಲಿ ಯಾಕೆ ನೀರಿಲ್ಲ? ನೀರು ಎಲ್ಲಿ ಹೋಯಿತು? ಮಳೆ ಇಲ್ಲದಿರುವುದೇ ನೀರಿನ ಕೊರತೆಗೆ ಕಾರಣವೆಂದು ಸಾಮಾನ್ಯವಾಗಿ ನಂಬಲಾಗುತ್ತದೆ. ನಮ್ಮ ಯಾವುದೇ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಾಗಿರುವ ಮಳೆ ಪ್ರಮಾಣವನ್ನು ನೋಡಿದರೆ ಮಳೆ ಕಡಿಮೆಯಾಗಿಲ್ಲ, ನಾವು ಕೆರೆ ನದಿಗಳಲ್ಲಿ ನೀರಿಲ್ಲದಿರುವುದನ್ನು ನೋಡಿ ಮಳೆ ಇಲ್ಲ ಎಂಬ ತೀರ್ಮಾನಕ್ಕೆ ಬರುತ್ತಿದ್ದೇವೆ.

ನೀರಿನ ಕೊರತೆಗೆ ಅನೇಕ ಕಾರಣಗಳಿರಬಹುದು. ಅದನ್ನು ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಸ್ಥಳೀಯವಾಗಿ ವಿಶ್ಲೇಷಿಸಬೇಕಾದರೂ ನಮ್ಮ ಒಟ್ಟಾರೆ ಗ್ರಹಿಕೆಯಲ್ಲಿ ತಪ್ಪಿದೆ ಎನಿಸುತ್ತದೆ.

### ಅರ್ಕಾವತಿ ಉದಾಹರಣೆ ನೋಡಿ

ಕರ್ನಾಟಕದ ಬಯಲುಸೀಮೆಯ ಭಾಗದ ಅರ್ಕಾವತಿ ನದಿ ಜಲಾನಯನವನ್ನು ಉದಾಹರಣೆಯಾಗಿ ಸಮಸ್ಯೆಗೆ ಕಾರಣ ಮತ್ತು ಪರಿಹಾರಗಳನ್ನು ಪರಿಶೀಲಿಸೋಣ. ಅರ್ಕಾವತಿಯು ಕಾವೇರಿಯ ಉಪನದಿ. ನದಿ ಹುಟ್ಟುವ ನಂದಿ ಬೆಟ್ಟದಿಂದ ಹೆಸರಘಟ್ಟದವರೆಗೂ ಅದೊಂದು ಕೆರೆಸರಣಿ. ಅಲ್ಲಿಂದ ಮುಂದಕ್ಕಷ್ಟೇ ಅದೊಂದು ಸಣ್ಣ ನದಿ. ಇತ್ತಿಚಿನ ಕೆಲವು ವರ್ಷಗಳಿಂದ ಈ ನದಿ ಜಲಾನಯನದ ಕೆರೆಗಳಿಗೆ ನೀರು ಬರುತ್ತಿಲ್ಲ, ಬೆಂಗಳೂರಿಗೆ ನೀರು ಸರಬರಾಜು ಮಾಡಲೆಂದೇ ನದಿಗೆ ಅಡ್ಡಲಾಗಿ ಕಟ್ಟಿದ್ದ ಹೆಸರಘಟ್ಟ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯಗಳು ಬರಿದಾಗಿವೆ.

## ಅಭಿಮತ

■ ಜನಾರ್ದನ ಕೆಸರಗದ್ದೆ
■ ಡಾ| ಶರಚ್ಚಂದ್ರ ಲೇಲೆ

> ಇಂದು ನದಿಗಳಲ್ಲಿ ಯಾಕೆ ನೀರು ಕಡಿಮೆಯಾಗುತ್ತಿದೆ? ನೀರು ಎಲ್ಲಿ ಹೋಯಿತು? ಮಳೆ ಇಲ್ಲದಿರುವುದೇ ನೀರಿನ ಕೊರತೆಗೆ ಕಾರಣವೆಂದು ನಾವು ನಂಬುತ್ತೇವೆ. ಆದರೆ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಾಗಿರುವ ಮಳೆ ಪ್ರಮಾಣ ನೋಡಿದರೆ ಮಳೆ ಕಡಿಮೆಯಾಗಿಲ್ಲ ಎಂಬುದು ತಿಳಿಯುತ್ತದೆ.

ಹಲವು ವರ್ಷಗಳಿಂದ ಕೊಳವೆ ಬಾವಿಗಳ ನೀರು ಬಳಸುತ್ತಿದ್ದ ನಾವು ಅಂತರ್ಜಲವೂ ಕೂಡ ಬತ್ತಿ ಹೋದ ನಂತರ ಕೆರೆ ನದಿಗಳೂ ಬತ್ತುತ್ತಿವೆ ಎಂದು ಗಮನಿಸಲು ಶುರುಮಾಡಿದ್ದೇವೆ.

**ಇಂದು ವಿಶ್ವ ಜಲ ದಿನ**

ಮಳೆ ಕಡಿಮೆಯಾಗಿಲ್ಲ ಎಂದು ಒಪ್ಪುವ ಕೆಲವು ತಜ್ಞರೂ ಅಂತರ್ಜಲ ಮರುಪೂರಣವಾಗುತ್ತಿಲ್ಲ ಎಂಬ ಕಾರಣ ಕೊಡುತ್ತಾರೆ. ಅಂತರ್ಜಲ ಮರುಪೂರಣ ಮಾಡುವುದಕ್ಕಾಗಿ ಆಂದೋಲನಗಳಾಗುತ್ತಿವೆ. ಕೆರೆಗಳ ಶೇಖರಣ ಸಾಮರ್ಥ್ಯ ಹೆಚ್ಚಿಸಲು ಕೋಟಿಗಳು ಖರ್ಚಾಗುತ್ತಿವೆ. ಕೆರೆಗಳ ಕೋಡಿ ಹರಿದು ಹೋಗುತ್ತಿಲ್ಲವೆಂದ ಮೇಲೆ ಕೆರೆಯ ಹೂಳು ತೆಗೆದು ಶೇಖರಣ ಸಾಮರ್ಥ್ಯ ಹೆಚ್ಚಿಸುವ ಕಾರ್ಯ ಯಾಕೆ?

ಇಡೀ ಜಲಾನಯನದಲ್ಲಿ ಅಂತರ್ಜಲ ಮರುಪೂರಣ ಕಾರ್ಯಕ್ರಮ ಮಾಡಿದರೆ ಎಲ್ಲಾ ಕಾಲುವೆಗಳನ್ನು ಬಿಡಿಸಿ ಕೆರೆಗಳ ಹೂಳು ಎತ್ತಿದರೆ ಸಮಸ್ಯೆ ಸರಿಹೋಗಬಲ್ಲದೇ? ಖಂಡಿತ ಇಲ್ಲ, ಯಾಕೆಂದರೆ ಒಂದು ಜಲಾನಯನ ಪ್ರದೇಶದ ಹೈಡ್ರಾಲಜಿಯನ್ನು ಗಮನಿಸುವುದಾದರೆ ಅಂತರ್ಜಲ ಮರುಪೂರಣಕ್ಕೆ ವ್ಯವಸ್ಥೆ ಮಾಡಿದಾಗ ನೀರು ನೇರವಾಗಿ ಆವಿಯಾಗುವ ಪ್ರಮಾಣವಷ್ಟೇ ಕಡಿಮೆಯಾಗುವುದೇ ಹೊರತು ಒಟ್ಟು ನೀರಿನ ಲಭ್ಯತೆ ಹೆಚ್ಚಾಗಲು ಸಾಧ್ಯವಿಲ್ಲ, ಅಂತರ್ಜಲ ಮಟ್ಟವು ಬಹಳಷ್ಟು ಆಳಕ್ಕೆ ಹೋಗಿ ಮಣ್ಣು ಒಣಗಿಕೊಂಡಿರುವುದರಿಂದ ಎಂತಹ ಮಳೆ ಬಂದರೂ ಕೆರೆ ಹಳ್ಳಗಳಿಗೆ ನೀರು ಹರಿದು ಬರುವುದಿಲ್ಲ, ಮಳೆಯಾದಾಗ ಉಂಟಾಗುವ ತೇವವು ನಾವು ಬೆಳೆಯುವ ವಾರ್ಷಿಕ ನೀರಾವರಿ ಬೆಳೆಗಳು, ನೀಲಗಿರಿ ಮುಂತಾದ ಗಿಡಮರಗಳ ಮೂಲಕ ಬಾಷ್ಪೀಕರಣಗೊಳ್ಳುತ್ತಿದೆ. ಅಂತರ್ಜಲ ಮಟ್ಟ ಕೆಳಕ್ಕಿಳಿದಿರುವ ಕಾರಣದಿಂದ ಮಳೆಯಾದಾಗ ಮಣ್ಣು ತನುವಾಗಿ ಒರತೆಯ ನೀರಾಗಿ ಪರಿವರ್ತಿತವಾಗುವುದಿಲ್ಲ, ನಾವು ಅನೇಕ ವರ್ಷಗಳ ಕಾಲ ಮರುಪೂರಣ ಮಾಡಿದರೂ ಜಲಮಟ್ಟವನ್ನು ಮೇಲೆತ್ತಲು ಸಾಧ್ಯವಿಲ್ಲ, ಯಾಕೆಂದರೆ ಅಷ್ಟರ ಮಟ್ಟಿಗೆ ಅಂತರ್ಜಲ ಮಟ್ಟ ಕುಸಿದಿದೆ ಹಾಗೂ ಮರುಪೂರಣವಾದಂತೆಲ್ಲಾ ಅತ್ತ ಕೊಳವೆ ಬಾವಿಗಳಿಂದ ನೀರೆತ್ತುವುದು ನಡೆಯುತ್ತಲೇ ಇರುತ್ತದೆ.

ಆದುದರಿಂದ ಹೆಚ್ಚು ನೀರು ಹೀರುವ, ಹೆಚ್ಚು ಬಾಷ್ಪೀಕರಣಕ್ಕೆ ಕಾರಣವಾಗುವ ಬೆಳೆಗಳನ್ನು, ಮರಗಳನ್ನು ಕಡಿಮೆ ಮಾಡದ ಹೊರತು, ನೀರಾವರಿ ಬೆಳೆ ಪ್ರದೇಶವನ್ನು ಕಡಿಮೆ ಮಾಡದ ಹೊರತು ನಮ್ಮ ನೀರಿನ ಸಮಸ್ಯೆ ಪರಿಹಾರವಾಗಲಾರದು.

### ಹನಿ ನೀರಾವರಿಯಿಂದ ಲಾಭವೆ?

ಬಜೆಟ್‌ನಲ್ಲಿ 1 ಲಕ್ಷ ರೈತರಿಗೆ ಹನಿ ನೀರಾವರಿ ಅಳವಡಿಸಲು ಶೇ.90 ಸಹಾಯಧನ ನೀಡುವ ಘೋಷಣೆಯಾಗಿದೆ. ಬೆಳೆಗಳಿಗೆ ಹನಿ ನೀರಾವರಿ ಮಾಡಿದರೆ ನೀರಿನ ಉಳಿಕೆ ಆಗಬಹುದು. ಅಣೆಕಟ್ಟು ನೀರಾವರಿ ಇರುವಲ್ಲಿ ನೀರಿನ ಕೊರತೆ ಇರುವುದಿಲ್ಲವಾದ್ದರಿಂದ ರೈತರೇಕೆ ಈ ಬಗ್ಗೆ ಆಸಕ್ತಿ ವಹಿಸುತ್ತಾರೆ? ಬೃಹತ್ ನೀರಾವರಿ ಇಲ್ಲದ ಕಡೆ, ಬಯಲು ಸೀಮೆಯಲ್ಲಿ ತಮ್ಮ ಜಮೀನಿನ ಸ್ವಲ್ಪ ಭಾಗದಲ್ಲಿ ಮಾತ್ರ ಬೆಳೆ ಬೆಳೆಯುತ್ತಿರುವ ರೈತರು ಹನಿ ನೀರಾವರಿ ಅಳವಡಿಸಿ ಬೆಳೆ ಬೆಳೆಯುವ ಪ್ರದೇಶವನ್ನು ಹೆಚ್ಚಿಸಿಕೊಳ್ಳಬಹುದು. ಆಗಲೂ ನೀರಿನ ಉಳಿಕೆ ಆದಂತಾಗುವುದಿಲ್ಲ, ಆದರೆ ಇರುವ ನೀರಿನಲ್ಲಿಯೇ ಹೆಚ್ಚು ಆದಾಯ ಪಡೆಯಲು ಅನುಕೂಲ ಮಾಡಿ ಕೊಟ್ಟಂತಾಯಿತು. ಕೊಳವೆ ಬಾವಿಯಲ್ಲಿ ನೀರೇ ಇಲ್ಲದ ಸಣ್ಣ ಅತಿಸಣ್ಣ ರೈತರ ಸಮಸ್ಯೆಗೇನು ಪರಿಹಾರ?

ಅಷ್ಟಕ್ಕೂ ನಮ್ಮ ರಾಜ್ಯದಲ್ಲಿ ನೀರು ಇರುವ ಕಡೆ ಯಥೇಚ್ಛ ನೀರು ಬಳಸಿ ಭತ್ತ, ಕಬ್ಬು, ಬಾಳೆ, ಅಡಕೆ ಬೆಳೆಯಲಾಗುತ್ತಿದೆ. ಅದು ಕೂಡ ಇಳುವರಿಯ ಕೊರತೆ, ಬೆಲೆಯ ಸಮಸ್ಯೆ, ಮಾರುಕಟ್ಟೆಯ ಏರುಪೇರುಗಳ ಜೊತೆಗೆ ಗುದ್ದಾಡಿಕೊಂಡು!

ನೀರಿನ ಬರಗಾಲ ಇರುವ ಪ್ರದೇಶಗಳಲ್ಲೂ ಕಾರ್ಖಾನೆಗಳೇನೂ ನಿಂತಿಲ್ಲ, ಕಾರ್ಖಾನೆಗಳವರು ಅಲ್ಲೇ ಎಲ್ಲೋ ಸಿಗುವ ನೀರಿಗೆ ಬೆಲೆ ಕೊಟ್ಟು ಖರೀದಿಸಿ ಬಳಸುತ್ತಿದ್ದಾರೆ. ಅಂತಹ ಊರುಗಳಲ್ಲಿ ಕುಡಿಯುವ ನೀರಿಗೆ ತತ್ವಾರವಿದ್ದರೂ ಅಂತರ್ಜಲ ಬಸಿದು ಕಾರ್ಖಾನೆಗಳಿಗೆ ಮಾರುವ ಕೆಲಸ ನಿರಂತರ ನಡೆಯುತ್ತಿದೆ.

ನೀರನ್ನು ಸಾರ್ವಜನಿಕ ಸಂಪತ್ತಾಗಿ ಪರಿಗಣಿಸಬೇಕು. ಹೆಚ್ಚು ನೀರು ಇರುವಲ್ಲಿಂದ ಕಡಿಮೆ ಇರುವ ಪ್ರದೇಶಗಳಿಗೆ ಪಾರಿಸರಿಕ ಅಡ್ಡ ಪರಿಣಾಮಗಳಾಗದಂತೆ ಮರು ಹಂಚಿಕೆ ಮಾಡಬೇಕು. ಬಡವರು ಸಣ್ಣ ಅತಿ ಸಣ್ಣ ರೈತರು ಎಲ್ಲರೂ ನೀರಿನಲ್ಲಿ ಪಾಲು ಪಡೆಯುವಂತಾಗಬೇಕು. ನಮ್ಮ ಬೆಳೆ, ನೀರಾವರಿ ಪದ್ಧತಿಗಳನ್ನು ಬದಲಾಯಿಸಿ, ಮೇಲ್ಜಲ ಮತ್ತು ಅಂತರ್ಜಲವನ್ನು ಸುಸ್ಥಿರವಾಗಿ ಬಳಸುವ ಯೋಜನೆಗಳಾಗಬೇಕು. ಕೃಷಿ, ಕೈಗಾರಿಕೆ ಮತ್ತು ಮನೆ ಬಳಕೆಯ ಆದ್ಯತೆಗಳನ್ನು ಗಮನಿಸಿ, ನೀರಿನ ಲಭ್ಯತೆಗಳನ್ನು ಗಮನಿಸಿ ರಾಜ್ಯ ಮಟ್ಟ, ಜಲಾನಯನ ಮಟ್ಟ ಮತ್ತು ಪಂಚಾಯತ್ ಮಟ್ಟದಲ್ಲಿ ಜಲ ಆಯವ್ಯಯವನ್ನು ಮಾಡಬೇಕು. ಲಾಭಕ್ಕಿಂತಲೂ ಹೆಚ್ಚಾಗಿ ಜೀವನೋಪಾಯವನ್ನು ಪ್ರಥಮ ಆದ್ಯತೆಯಾಗಿ ಪರಿಗಣಿಸಿ ಯೋಜನೆಗಳನ್ನು ರೂಪಿಸಬೇಕು. ಕೃಷಿ, ನೀರಾವರಿ ಪದ್ಧತಿ, ನೀರಾವರಿ ಬೆಳೆ ಪ್ರದೇಶ, ಪ್ರಾದೇಶಿಕ ಸಮಾನತೆ, ಸಾಮಾಜಿಕ ನ್ಯಾಯದ ಅಂಶಗಳನ್ನು ಸಮನ್ವಯ ಮಾಡಿ ಸಮಗ್ರ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತಂದರೆ ಮಾತ್ರ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ.

★ ಜನಾರ್ದನ ಅವರು ಜಲಾಂದೋಲನ ಕಾರ್ಯಕರ್ತರು, ಶರಚ್ಚಂದ್ರ ಅವರು ಪರಿಸರ ಸಂಶೋಧಕರು.



ಮೋದಿ ಸರಕಾರಕ್ಕೆ ಬಡಜನರ ಬಗ್ಗೆ ಕಾಳಜಿಯಿಲ್ಲ, ತೋರಿಕೆಗಷ್ಟೇ ಬಡವರ ಪರ ಸರಕಾರ ಎಂದು ಹೇಳುತ್ತಾರೆ. ರಾಜ್ಯದಲ್ಲಿ ಬರದಿಂದ ಜನರು ಹಾಹಾಕಾರ ಪಡುತ್ತಿದ್ದರೆ ಪರಿಹಾರ ಕೊಡಲು ಮೀನಮೇಷ ಎಣಿಸುತ್ತಿದೆ. **- ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ**



ರಾಜ್ಯದ ಬರವನ್ನು ನಿರ್ವಹಣೆ ಮಾಡಲು ಕೇಂದ್ರ ಸರಕಾರ ಹಣ ಬಿಡುಗಡೆ ಮಾಡಿದೆ. ಆದರೆ ರಾಜ್ಯ ಸರಕಾರ ಹಣವನ್ನು ಸರಿಯಾಗಿ ಬಳಸಿಕೊಳ್ಳಲು ವಿಫಲವಾಗಿರುವುದರಿಂದ ಜನರು ಸಂಕಷ್ಟ ಎದುರಿಸುವಂತಾಗಿದೆ. **- ಬಿ.ಎಸ್. ಯಡಿಯೂರಪ್ಪ, ಮಾಜಿ ಸಿಎಂ**




**ಜನತಾವಾಣಿ**

janathavani@manipalmedia.com

### ಕಲಾರಂಗದ ಸಹಾಯವೂ ದಾಖಲಾಗಲಿ

ಕಲಾವಿದರ ನಿಧನ ಸಂದರ್ಭ, ಅನಾರೋಗ್ಯ – ಅಪಘಾತ ಸಂದರ್ಭಗಳಲ್ಲಿ ಭಾವನಾತ್ಮಕವಾದ ಲೇಖನಗಳು ಪ್ರಕಟವಾಗುತ್ತವೆ. ಅವರ ಕುರಿತ ಗೌರವ, ಅವರಿಗೆ ಸಮಾಜವು ಸ್ಪಂದಿಸಿದ ರೀತಿ, ಇವೆಲ್ಲ ದಾಖಲಾಗುತ್ತಾ ಇವೆ. ಇವೆಲ್ಲವೂ ಸ್ವಾಗತಾರ್ಹ ಮತ್ತು ಪ್ರಶಂಸಾರ್ಹ ವಿಚಾರಗಳು. ಜತೆಗೆ ''ಕಲಾವಿದರಿಗೆ ಸಹಾಯ ಇಲ್ಲ, ಸ್ಪಂದನ ಇಲ್ಲ'' ಎಂಬ ಧ್ವನಿಗಳೂ ಒಂದಿಷ್ಟು ಕೇಳುತ್ತಾ ಇರುತ್ತವೆ. ಈ ಸಂದರ್ಭದಲ್ಲಿ ಒಂದು ಮಾಹಿತಿ ತಿಳಿಸುವುದಕ್ಕೆ ಈ ಪತ್ರ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆಯ ''ಯಕ್ಷನಿಧಿ'' ಎಂಬ ಅಂಗಸಂಸ್ಥೆಯು ಕಳೆದ ಹದಿನಾರು ವರ್ಷಗಳಿಂದ ಕಲಾವಿದರ ಆರ್ಥಿಕ ಸಶಕ್ತೀಕರಣಕ್ಕಾಗಿ ನಿಸ್ವಾರ್ಥಿ, ಸಮರ್ಪಿತ ಕಾರ್ಯಕರ್ತರ ಬಲದಿಂದ ಯಥಾಶಕ್ತಿ ದುಡಿಯುತ್ತಿದೆ. ವಿಪತ್ತಿನ ಸಂದರ್ಭಗಳಲ್ಲಿ, ನಿಯಮಾನುಸಾರ ಮತ್ತು ನಿಯಮಗಳ ಹೊರಗೆ (ದಾನಿಗಳ ಮನವೊಲಿಸಿ ಕೇಳಿ ಪಡೆದು) ಗಣನೀಯ ಮೊತ್ತದ ನೆರವು ಸಲ್ಲಿಸುತ್ತಿದೆ. ಕಲಾರಂಗಕ್ಕೆ ಈ ಬಗ್ಗೆ ಧನ್ಯತೆ ಇದೆ. ದುಡಿಮೆಗೆ ಕೃತಾರ್ಥತೆ ಇದೆ.

ಆದರೆ ಈ ವಿಚಾರ ಹಲವು ಬಾರಿ ಬರಹಗಳಲ್ಲಿ ದಾಖಲಾಗುವುದೇ ಇಲ್ಲ, ಫಲಾನುಭವಿಗಳು ತಿಳಿಸುವುದಿಲ್ಲವೋ? ಸ್ವತಃ ಸದಸ್ಯ ಕಲಾವಿದರೇ ನಮ್ಮ ನೆರವಿಗೆ ಸಂಘಟನೆ ಇಲ್ಲ, ಸಮಾಜ ನಮ್ಮೊಂದಿಗಿಲ್ಲ ಎಂದು ಹೇಳುತ್ತಾರೆ. ಇದು ವಿಪರ್ಯಾಸ.

ಇದು ವ್ಯಕ್ತಿಗಳ ಪ್ರಶ್ನೆ ಅಲ್ಲ, ಸಂಸ್ಥೆಯ ಕೆಲಸದ ಗುರುತಿಸುವಿಕೆಯ ಪ್ರಶ್ನೆ. ಪ್ರಭಾವಿ ಕಲಾವಿದರು ಈ ಸಂಸ್ಥೆಯನ್ನು ತುಂಬ ಬೆಳೆಸಬಹುದು. ಹೋಗಲಿ, ಅಲ್ಲಲ್ಲಿ ಅಸ್ತಿತ್ವ ತಿಳಿಸಬಹುದಲ್ಲವೇ?

**ಮಂಗಳೂರು ಡಾ| ಎಂ. ಪ್ರಭಾಕರ ಜೋಶಿ**

### ಸಾರ್ವಜನಿಕ ರಂಗದ ಬ್ಯಾಂಕುಗಳಿಗೆ ಬಂಡವಾಳ ಏತಕ್ಕಾಗಿ?

ಸಾವಿರಾರು ಕೋಟಿ ರೂಪಾಯಿ ಸುಸ್ತಿ ಸಾಲ ಮತ್ತು ಸಾವಿರಾರು ಕೋಟಿ ರೂಪಾಯಿ ಮೊತ್ತದ ಅನುತ್ಪಾದಕ ಆಸ್ತಿ ಸಾಲದಿಂದ ಸಂಕಷ್ಟದಲ್ಲಿರುವ ಸರಕಾರಿ ಬ್ಯಾಂಕುಗಳ ಬಲವರ್ಧನೆಗಾಗಿ ಕೇಂದ್ರ ಮುಂಗಡಪತ್ರದಲ್ಲಿ 25 ಸಾವಿರ ಕೋಟಿ ರೂ.ಗಳ ಅನುದಾನವನ್ನು ಮರುಬಂಡವಾಳವಾಗಿ ವಿತ್ತ ಸಚಿವ ಅರುಣ್ ಜೇಟ್ಲಿ ಮೀಸಲಿರಿಸಿದ್ದಾರೆ. ಅಲ್ಲದೇ ಈ ಬ್ಯಾಂಕುಗಳಿಗೆ ಇನ್ನೂ ಹೆಚ್ಚಿನ ಹಣಕಾಸಿನ ಅಗತ್ಯ ಬಿದ್ದರೆ ಸರಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತುತ ದೇಶದಲ್ಲಿ ಹಲವಾರು ಖಾಸಗಿ ರಂಗದ ಬ್ಯಾಂಕುಗಳು ಜನಸಾಮಾನ್ಯರಿಗೆ ಉತ್ತಮ ಸೇವೆ ನೀಡುತ್ತಿರುವುದರಿಂದ ಉತ್ತಮ ಲಾಭದಲ್ಲಿ ನಡೆಯುತ್ತಿದೆ. ಆದರೆ ಸರಕಾರಿ ಬ್ಯಾಂಕುಗಳಿಗೆ ಏಕೆ ಇದು ಸಾಧ್ಯವಾಗುತ್ತಿಲ್ಲ? ದೇಶದಲ್ಲಿ ಸರಕಾರಿ ಬ್ಯಾಂಕುಗಳ ಸಾಲ ತೀರಿಸಲು ಸಾಧ್ಯವಾಗದೇ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಜನಸಾಮಾನ್ಯರು ಸಾಲ ಮಾಡಿ ಸರಿಯಾಗಿ ಮನೆ ಸಾಲ ಮರುಪಾವತಿ ಮಾಡದಿದ್ದರೆ ಸಾಲ ಎನ್.ಪಿ.ಎ. ಆದಕೂಡಲೇ ಸಾಲವಿರುವ ಮನೆಯನ್ನೇ ಸ್ವಾಧೀನಪಡಿಸಿಕೊಂಡು ಏಲಂ ಮಾಡುತ್ತಾರೆ. ಬ್ಯಾಂಕುಗಳು ಮತ್ತು ಸರಕಾರ ಬಡಪಾಯಿಗಳು ಕಟ್ಟಬೇಕಿರುವ ಅಸಲು ಮತ್ತು ಬಡ್ಡಿ ವಿಚಾರದಲ್ಲಿ ಕಟ್ಟುನಿಟ್ಟಾದ ಶಿಸ್ತು ಪಾಲಿಸುತ್ತವೆ. ಇಂತಹ ಜನಸಾಮಾನ್ಯರಿಗೆ ಯಾವ ರೀತಿಯ ಸಹಾಯಹಸ್ತ ಇದೆ?

ಸಂಕಷ್ಟದಲ್ಲಿರುವ ಸರಕಾರಿ ಬ್ಯಾಂಕುಗಳಿಗೆ 25 ಸಾವಿರ ಕೋಟಿ ರೂ. ಬಂಡವಾಳ ಮೀಸಲಿರಿಸುವುದು ಏತಕ್ಕಾಗಿ? ಮದ್ಯ ದೊರೆ ವಿಜಯ ಮಲ್ಯರಂತಹ ಉದ್ಯಮಿಗಳಿಗೆ ಈ ಬ್ಯಾಂಕುಗಳು ನೀಡಿರುವಂತೆ ಭಾರೀ ಮೊತ್ತದ ಮರುಪಾವತಿ ಆಗದ ಸಾಲ ನೀಡಲಿಕ್ಕಾಗಿಯೇ? ಭಾರೀ ಕೈಗಾರಿಕೋದ್ಯಮಿಗಳಿಗೆ ಸಾವಿರಾರು ಕೋಟಿ ರೂ.ಗಳಲ್ಲಿ ಸಾಲ ನೀಡಿ ಮರುಪಾವತಿಯಾಗದೇ ಇರುವಾಗ ಸಾಲ ಮನ್ನಾ ಮಾಡಲಿಕ್ಕಾಗಿಯೇ? ನೌಕರರಿಗೆ ಭಾರೀ ಸಂಬಳ, ಸ್ವಯಂ ನಿವೃತ್ತಿ, ನಿವೃತ್ತಿ ಹೊಂದುವಾಗ ಹಲವಾರು ಸೌಲಭ್ಯಗಳನ್ನು ಮತ್ತು ನಿವೃತ್ತಿವೇತನ ನೀಡಲಿಕ್ಕಾಗಿಯೇ? ಜನಸಾಮಾನ್ಯರ ತೆರಿಗೆ ಹಣದಿಂದ ನೀಡುವ ಈ 25 ಸಾವಿರ ಕೋಟಿ ರೂಪಾಯಿಗಳ ಅನುದಾನದಿಂದ ಜನಸಾಮಾನ್ಯರಿಗೆ ಏನು ಪ್ರಯೋಜನ ?

**ಮಂಗಳೂರು ಎಂ. ಗೋಕುಲ್‌ದಾಸ್ ಹೆಗ್ಡೆ**

# 8 ರೀತಿಯ ಮದುವೆಗಳಿವೆ; ಸದ್ಯಕ್ಕೆ ಎರಡೇ ರೀತಿ ಸಾಕು!

ಇಂದು ಅರೇಂಜ್ಡ್ ಮ್ಯಾರೇಜ್ ಹಾಗೂ ಲವ್ ಮ್ಯಾರೇಜ್–ಸಾಮಾನ್ಯವಾಗಿ ಇವೆರಡೇ ಚಾಲ್ತಿಯಲ್ಲಿರುವುದು. ಬಲವಂತದ ವಿವಾಹ, ಬಾಲ್ಯವಿವಾಹ, ಅಪಹರಣ ವಿವಾಹ ಇತ್ಯಾದಿಗಳು ಇವೆಯಾದರೂ ಅವುಗಳ ಪ್ರಮಾಣ ಬಹಳ ಕಡಿಮೆ. ಆದರೆ, ಪ್ರಾಚೀನ ಕಾಲದಲ್ಲಿ 8 ವಿಧದ ವಿವಾಹಗಳಿದ್ದವು. ಅವುಗಳಲ್ಲಿ ಅರೇಂಜ್ಡ್ ಮ್ಯಾರೇಜ್ ಹಾಗೂ ಲವ್ ಮ್ಯಾರೇಜ್ ಕೂಡ ಸೇರಿದ್ದವು! ಅವುಗಳ ಜೊತೆಗೆ ಇನ್ನೂ 6 ವಿಧದ ವಿವಾಹಗಳಿದ್ದವು. ಕಾಲ ಬದಲಾಗುತ್ತ ಹೋದಂತೆ ವಿವಾಹ ಸಂಬಂಧಿ ಆಚರಣೆಗಳೂ ಬದಲಾಗಿ ಈಗ ವಿಶಿಷ್ಟ ಕಾಲಘಟ್ಟಕ್ಕೆ ನಾವು ಬಂದು ನಿಂತಿದ್ದೇವೆ. ಮೇಲ್ನೋಟಕ್ಕೆ ಈಗ ಎರಡೇ ರೀತಿಯ ಮದುವೆಗಳಿವೆಯಾದರೂ ಲಿವಿಂಗ್ ಟುಗೆದರ್ ಆದಿಯಾಗಿ ಬೇರೆ ಬೇರೆ ರೀತಿಯ ಸಾಂಗತ್ಯಗಳು ಕೂಡ ರೂಢಿಯಲ್ಲಿವೆ. ಮೋಜಿಗೆ, ಕಾಟಾಚಾರಕ್ಕೆ, ಕಾನೂನಿಗೆ ಮಣ್ಣೆರಚಲು, ಹಣಕ್ಕಾಗಿ, ಅಧಿಕಾರಕ್ಕಾಗಿ... ಹೀಗೆ ಹಲವು ರೀತಿಯ 'ಮದುವೆಯಲ್ಲದ ಸಾಂಗತ್ಯಗಳು' ನಮ್ಮ ನಡುವೆ ಇವೆ.

ಭಾರತೀಯ ನಂಬಿಕೆಯ ಪ್ರಕಾರ ಪ್ರತಿಯೊಬ್ಬನೂ ಸಂಸಾರ ನಡೆಸಬೇಕೆಂದರೆ ವಿವಾಹದ ಮೂಲಕವೇ ಲೈಸನ್ಸ್ ಪಡೆದುಕೊಳ್ಳಬೇಕು. ವಿವಾಹ ನಮ್ಮ ಬದುಕನ್ನೇ ಬದಲಿಸುವ ಪ್ರಮುಖ ಘಟ್ಟ. ಈ ಪದದ ಅರ್ಥವೂ ವಿಶೇಷವಾಗಿದೆ. ವಿಶಿಷ್ಟಃ ವಾಹಃ ವಿವಾಹಃ. ವಿಶಿಷ್ಟವಾಗಿ ಒಯ್ಯುವುದು ವಿವಾಹ. ಒಯ್ಯುವುದು ಯಾರನ್ನು? ಕನ್ಯೆಯನ್ನು. ಎಲ್ಲಿಗೆ ಒಯ್ಯುವುದು? ಗೃಹಸ್ಥಾಶ್ರಮಕ್ಕೆ ಹಾಗೂ ಅದರ ಮೂಲಕ ಮೋಕ್ಷದವರೆಗೆ.



## ಮಾಡರ್ನ್ ಅಧ್ಯಾತ್ಮ

■ ರೂಪಾ ಅಯ್ಯರ್
roopaiyer.ica@gmail.com

> ವಿವಾಹ ನಮ್ಮ ಬದುಕನ್ನೇ ಬದಲಿಸುವ ಪ್ರಮುಖ ಘಟ್ಟ. ಈ ಪದದ ಅರ್ಥವೂ ವಿಶೇಷವಾಗಿದೆ. ವಿಶಿಷ್ಟಃ ವಾಹಃ ವಿವಾಹಃ. ವಿಶಿಷ್ಟವಾಗಿ ಒಯ್ಯುವುದು ವಿವಾಹ. ಒಯ್ಯುವುದು ಯಾರನ್ನು? ಕನ್ಯೆಯನ್ನು. ಎಲ್ಲಿಗೆ ಒಯ್ಯುವುದು? ಗೃಹಸ್ಥಾಶ್ರಮಕ್ಕೆ ಹಾಗೂ ಅದರ ಮೂಲಕ ಮೋಕ್ಷದವರೆಗೆ.

### ಹಿಂದಿನ ಕಾಲದ ಅಷ್ಟ ವಿವಾಹ

ಧರ್ಮಶಾಸ್ತ್ರಗಳಲ್ಲಿ ಈ ಎಲ್ಲ ವಿವಾಹಗಳ ಉಲ್ಲೇಖವಿದೆ.

**1.ಬ್ರಾಹ್ಮ ವಿವಾಹ:** ತಂದೆಯಾದವನು ಮಗಳಿಗೆ ತಾನೇ ವರನನ್ನು ಹುಡುಕುವುದು. ಆ ವರ ಒಳ್ಳೆಯ ನಡತೆಯವನು, ಸದಾಚಾರವಂತನು, ವಿದ್ಯಾವಂತನು, ವೇದಾಧ್ಯಯನ ಸಂಪನ್ನನು ಎಂಬುದನ್ನು ಖಾತ್ರಿಪಡಿಸಿಕೊಂಡು, ಅವನನ್ನು ಗೌರವಿಸಿ, ತನ್ನ ಶಕ್ತ್ಯನುಸಾರ ಮಗಳನ್ನು ಅಲಂಕರಿಸಿ ಮದುವೆ ಮಾಡಿಕೊಡುವುದು. ಕೊಂಚ ಮಾರ್ಪಾಡಾಗಿ, ಬಹುತೇಕ ಈ ಪದ್ಧತಿಯೇ ಇಂದಿಗೂ ಚಾಲ್ತಿಯಲ್ಲಿದೆ.

**2.ದೈವ ವಿವಾಹ:** ದೇವತಾ ಕಾರ್ಯಗಳು ಅಥವಾ ಯಜ್ಞ ಯಾಗಗಳನ್ನು ಮಾಡುತ್ತಿರುವ ಋತ್ವಿಕನಿಗೆ ಕನ್ಯೆಯ ತಂದೆಯು ತನ್ನ ಮಗಳನ್ನು ಯಥಾಶಕ್ತಿ ಅಲಂಕರಿಸಿ ದಾನ ಮಾಡುವುದು. ಹಿಂದಿನ ಕಾಲದಲ್ಲಿ ಯಜ್ಞ ಯಾಗಗಳಲ್ಲಿ ಕನ್ಯಾದಾನ ಮಾಡುವುದೇ ಶ್ರೇಷ್ಠವೆನಿಸಿಕೊಂಡಿದ್ದರಿಂದ ಆಗ ಈ ವಿವಾಹ ಬಹಳ ನಡೆಯುತ್ತಿತ್ತು. ಋಷಿಯೊಬ್ಬನಲ್ಲಿರುವ ಅಧ್ಯಾತ್ಮ ಜ್ಞಾನ, ಆಧ್ಯಾತ್ಮಿಕ ಸಂಸ್ಕೃತಿಯನ್ನು ಗಮನಿಸಿ ಗೌರವಾರ್ಥವಾಗಿ ತನ್ನ ಮಗಳನ್ನು ಕೊಡುತ್ತಿದ್ದರು.

**3.ಆರ್ಷ ವಿವಾಹ:** ಹುಡುಗಿಯ ತಂದೆಯು ತಾನು ಮಾಡುವ ಯಜ್ಞಕ್ಕೆ ಸಹಾಯಾರ್ಥವಾಗಿ ಒಂದು ಜೊತೆ ಗೋವುಗಳನ್ನು ಯಾರಿಂದ ಪಡೆದುಕೊಳ್ಳುತ್ತಿದ್ದನೋ ಅವರಿಗೆ ತನ್ನ ಮಗಳನ್ನು ಕೊಡುವುದು. ಜೋಡಿ ಹಸುಗಳು ಕನ್ಯೆಯ ಬೆಲೆಗೆ ಸಮವಲ್ಲವಾದರೂ ತಂದೆ 2 ಗೋವುಗಳಿಗಿಂತ ಅಧಿಕವಾಗಿ ಕೇಳುವಂತಿಲ್ಲ, ಋಗ್ವೇದದ ಕಾಲದಲ್ಲಿ ಇದು ರೂಢಿಯಲ್ಲಿತ್ತು. ಈ ಆರ್ಷ ವಿವಾಹ ದೈವ ವಿವಾಹಕ್ಕಿಂತ ಕೆಳದರ್ಜೆಯದೆಂದು ಪರಿಗಣಿಸಲಾಗಿತ್ತು.

**4.ಪ್ರಾಜಾಪತ್ಯ ವಿವಾಹ:** ಹುಡುಗಿಯ ತಂದೆ ಮದುವೆಗೆ ಮುನ್ನವೇ ಹುಡುಗ ಮತ್ತು ಹುಡುಗಿಗೆ ಷರತ್ತು ವಿಧಿಸಿ ವಿವಾಹ ಮಾಡುವುದು.



ಆ ಷರತ್ತು ಏನೆಂದರೆ, ನೀವಿಬ್ಬರೂ ಜೊತೆಜೊತೆಯಾಗಿ ವೈದಿಕ ಧರ್ಮ ಕ್ರಿಯೆಗಳನ್ನು ಮಾಡಬೇಕು, ಲೌಕಿಕ ಯಜ್ಞಯಾಗಗಳನ್ನು ಆಚರಿಸಬೇಕು. ಇಬ್ಬರಲ್ಲಿ ಒಬ್ಬರು ಮತ್ತೊಬ್ಬರಿಗೆ ತಿಳಿಯದಂತೆ ಯಾವ ವಿಧವಾದ ಕೆಲಸಗಳನ್ನೂ ಮಾಡಕೂಡದು. ಹೀಗೆ ನಿಯಮ ವಿಧಿಸಿ ಯೋಗ್ಯ ಹುಡುಗನ ಜೊತೆ ತಮ್ಮ ಕನ್ಯೆಯನ್ನು ಅಲಂಕರಿಸಿ ದಾನ ಮಾಡುವ ವಿವಾಹಕ್ಕೆ ಪ್ರಾಜಾಪತ್ಯ ಎಂದು ಹೇಳಿದ್ದಾರೆ. ಧಾರ್ಮಿಕವಾಗಿ ಇಂದಿನ ಮದುವೆಗಳು ಇದೇ ಪ್ರಭೇದಕ್ಕೆ ಸೇರಿದವು.

**5.ಆಸುರ ವಿವಾಹ:** ಇದರಲ್ಲಿ ಹಣವೇ ಬಹುಮುಖ್ಯ. ಇದನ್ನು ಮಾನುಷ ವಿವಾಹವೆಂತಲೂ ಕರೆಯುತ್ತಾರೆ. ಇಲ್ಲಿ ವರನೇ ಕನ್ಯೆಯ ಮನೆಗೆ ಬಂದು, ತಂದೆಗೆ ಯಥಾಶಕ್ತಿ ಹಣ ಕೊಟ್ಟು ತನಗಿಷ್ಟ ಬಂದಂತೆ ಹುಡುಗಿಯನ್ನು ಕರೆದೊಯ್ಯುತ್ತಿದ್ದ. ಇದು ಕ್ಷತ್ರಿಯ ರಾಜ ಮನೆತನದ ಪದ್ಧತಿಯಾಗಿತ್ತು. ತಂದೆ ತಾಯಿ ಹಣದ ಆಸೆಗೆ ಬಡತನ ಹೋಗಲಾಡಿಸಿಕೊಳ್ಳಲು ಹಣ ತೆಗೆದುಕೊಂಡು ಕನ್ಯೆಯನ್ನು ವಿವಾಹಕ್ಕೆ ಒಪ್ಪಿಸುತ್ತಿದ್ದರು.

**6. ಗಾಂಧರ್ವ ವಿವಾಹ:** ಹುಡುಗಿ ತನ್ನ ಪತಿಯಾಗುವವನನ್ನು ತಾನೇ ಹುಡುಕಿಕೊಳ್ಳುವುದನ್ನು ಮತ್ತು ಹುಡುಗ–ಹುಡುಗಿ ತಮ್ಮಿಬ್ಬರ ಪರಸ್ಪರ ಒಪ್ಪಂದದ ಮೇರೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳುವುದನ್ನು ಗಾಂಧರ್ವ ವಿವಾಹವೆಂದು ಕರೆದಿದ್ದಾರೆ. ಈ ವಿವಾಹವನ್ನು ತಂದೆ–ತಾಯಿ ನಿಶ್ಚಯಿಸದೇ ವಧು–ವರರೇ ನಿರ್ಧರಿಸಿಕೊಂಡಿರುತ್ತಾರೆ. ಕಾಳಿದಾಸನ ನಾಟಕದ ಪಾತ್ರಧಾರಿಗಳಾದ ದುಷ್ಯಂತ ಹಾಗೂ ಶಕುಂತಲೆ ಮದುವೆಯಾಗಿದ್ದು ಹೀಗೆಯೇ. ಹುಡುಗಿ ವಯಸ್ಸಿಗೆ ಬಂದಮೇಲೆ ತಂದೆ–ತಾಯಿ ಅವಳಿಗೆ ಮದುವೆ ಮಾಡದಿದ್ದರೆ, ಮೂರು ವರ್ಷ ಕಾದು ನೋಡಿ, ಕನ್ಯೆ ತಾನೇ ತನಗೆ ಯೋಗ್ಯನಾದ ವರನನ್ನು ಹುಡುಕಿಕೊಳ್ಳುವುದೂ ಇತ್ತು.

**7. ರಾಕ್ಷಸ ವಿವಾಹ:** ಹುಡುಗಿಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗಿ ಹಿಂಸಿಸಿ ವಿವಾಹಕ್ಕೆ ಒತ್ತಾಯಿಸಿ, ವರ ಮತ್ತು ವರನ ಕಡೆಯವರು ವಧುವಿನ ಮನೆಯವರನ್ನು ಕತ್ತರಿಸಿ–ಕೊಂದು–ಯುದ್ಧ ಮಾಡಿ– ಅವಾಚ್ಯ ಶಬ್ದಗಳಿಂದ ನಿಂದಿಸಿ, ಕನ್ಯೆಯ ಒಪ್ಪಿಗೆಯಿಲ್ಲದೆ ವಿವಾಹವಾಗುವುದನ್ನು ರಾಕ್ಷಸ ವಿವಾಹವೆಂದು ಕರೆಯುತ್ತಾರೆ.

**8. ಪೈಶಾಚ ವಿವಾಹ:** ಅತಿ ಕೀಳುಮಟ್ಟದ ವಿವಾಹಕ್ರಮ. ಹುಡುಗಿ ಮಲಗಿರುವಾಗ ಅಥವಾ ಪ್ರಜ್ಞಾಹೀನಳಾಗಿರುವಾಗ ಆ ಹುಡುಗಿಯನ್ನು ಅಪಹರಿಸುವುದೇ ಪೈಶಾಚ ವಿವಾಹ. ಸಂಸ್ಕೃತಿಹೀನರು ಹಾಗೂ ತುಚ್ಛವಾದ ಜನಗಳಲ್ಲಿ ಈ ಅಧರ್ಮ ವಿವಾಹವಿದ್ದಿರಬಹುದು.

### ಮದುವೆ ಹೇಗಾದರೂ ಬಾಳು ಸುಂದರವಾಗಿರಲಿ

ಸೂಕ್ಷ್ಮವಾಗಿ ಗಮನಿಸಿದರೆ ಮೇಲೆ ಹೇಳಿದ ಎಂಟೂ ರೀತಿಯ ವಿವಾಹಗಳು ಕೊಂಚ ಬೇರೆ ರೂಪದಲ್ಲಿ ಈಗಲೂ ಅಲ್ಲಲ್ಲಿ ಅಸ್ತಿತ್ವದಲ್ಲಿವೆ! ಆದರೆ ಕಾನೂನಿನ ಭಯದಿಂದ ಲವ್ ಹಾಗೂ ಅರೇಂಜ್ಡ್ ಮ್ಯಾರೇಜ್‌ಗಳು ಮಾತ್ರ ವಿಧಿವತ್ತಾಗಿ ನಡೆಯುತ್ತವೆ. ಬಹಿರಂಗವಾಗಿ ಅವುಗಳಿಗೆ ಮಾತ್ರ ಮಾನ್ಯತೆಯಿದೆ. ಇವು ಪ್ರಾಚೀನ ಕಾಲದ ಗಾಂಧರ್ವ ವಿವಾಹ ಹಾಗೂ ಬ್ರಾಹ್ಮ ವಿವಾಹಗಳು.

ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು ಜನರ ಚಿಂತೆಯೇನೆಂದರೆ, ಯಾವುದೋ ಒಂದು ಮದುವೆಯಾದರಾಯಿತು, ಆದರೆ ಅದು ವರ್ಕ್ ಆಗಬೇಕು ಎಂಬುದಷ್ಟೇ! ಏಕೆಂದರೆ ಸಮಾಜ ಮುಂದುವರೆದಷ್ಟೂ ಮದುವೆಯೆಂಬ ಬಂಧನ ಶಿಥಿಲವಾಗುತ್ತ ಸಾಗುತ್ತಿದೆ. ಮದುವೆಯೊಂದು ಯಶಸ್ವಿಯಾಗಬೇಕು ಅಂದರೆ ಅದಕ್ಕೆ ನಾನಾ ರೀತಿಯ ಅಡ್ಡಿಗಳು ಎದುರಾಗುತ್ತಿವೆ. ಸಂಬಂಧಗಳನ್ನು ನೋಡುವ ರೀತಿ ಬದಲಾಗುತ್ತಿದೆ. ಅವುಗಳಿಗೆ ನಿಷ್ಠರಾಗಿರಬೇಕು ಎಂಬ ಬದ್ಧತೆ ಕಡಿಮೆಯಾಗುತ್ತಿದೆ. ಇವನಲ್ಲ ಅಂದರೆ ಅವನು ಎಂಬ ಧೋರಣೆ ಹೆಚ್ಚುತ್ತಿದೆ. ಇದಕ್ಕೆ ಹಲವು ಕಾರಣಗಳಿರಬಹುದು. ಆದರೆ, ಒಟ್ಟಾಗಿ ಬಾಳಬೇಕು ಎಂಬ ಉದಾತ್ತ ಚಿಂತನೆಯ ಮುಂದೆ ಅವೆಲ್ಲ ಗೌಣ ಎಂಬುದನ್ನು ಯುವಕ–ಯುವತಿಯರು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬುದೇ ವಿಪರ್ಯಾಸ.

**ವಿಳಾಸ :** ಉದಯವಾಣಿ ಬಿಲ್ಡಿಂಗ್, ಪ್ರೆಸ್ ಕಾರ್ನರ್, ಮಣಿಪಾಲ –576 104 **ದೂರವಾಣಿ :** 0820–2571151 ರಿಂದ 2571159 **ಫ್ಯಾಕ್ಸ್ :** 0820–2572848 **eMail :** feedback@manipalmedia.com **web:** www.Udayavani.com

Published & Printed by **A.V. Balakrishna Holla** for Manipal Media Network Ltd. from Udayavani building, Press Corner, Manipal-576 104 and Printed at Udayavani Press, Udayavani Building, Press Corner, Manipal - 576 104. Editor: **A.V. Balakrishna Holla**. Group Editor: **Ravi Hegde**.

RNI No. 17179/70 | VOLUME 47 | ISSUE 82

All rights reserved. Reproduction in whole or in part without written permission is prohibited.

Phone Editorial: 0820-2570841, 2570842; Fax: 0820-2572848 EPABX: 0820-2571151 to 2571159, Advt: 2570845, Fax: 2570846, Cir: 2570848.